ಮುನ್ನಡೆಯಿಂದ....

# ಸೂಜಿ-ದಾರ

ಗಾರ್ಮೆಂಟ್ಸ್ ಕಾರ್ಮಿಕರ ಸಂಗಾತಿ....

ಸಂಪುಟ : 1 | ಸಂಚಿಕೆ : 4 | ಪುಟ : 8 | ಖಾಸಗಿ ಪ್ರಸಾರಕ್ಕಾಗಿ | ಏಪ್ರಿಲ್ 2006

## ಸಂಪಾದಕೀಯ...

ಮೇ ದಿನಾಚರಣೆಯನ್ನು ಮುಂದಿಟ್ಟುಕೊಂಡು ಸೂಜಿ-ದಾರ ಪತ್ರಿಕೆಯ ಮತ್ತೊಂದು ಸಂಚಿಕೆಯನ್ನು ಕೈಗಿಡಲು ಹರ್ಷಿಸುತ್ತಿದ್ದೇವೆ.

ಆತ್ಮೀಯರೇ, ದೇಶದ ಒಟ್ಟು ಸುಮಾರು 41 ಕೋಟಿ ಕಾರ್ಮಿಕರಲ್ಲಿ 38 ಕೋಟಿ ಮಂದಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಈ ಕಾರ್ಮಿಕರಿಗೆ ಸಂವಿಧಾನಾತ್ಮಕವಾಗಿ ದೊರಕಬೇಕಾಗಿರುವ ಯಾವುದೇ ಸವಲತ್ತುಗಳು ದೊರೆಯುವುದಿರಲಿ, ಸಂಘಟಿತ ವಲಯದಲ್ಲಿರುವ ಕಾರ್ಮಿಕರೂ ಸಹ ತಮ್ಮ ನ್ಯಾಯಯುತ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣಗಳೇ ಕಾರಣವಾಗಿದೆ. ಜನರಿಗೆ ಉದ್ಯೋಗಗಳನ್ನು ಒದಗಿಸುತ್ತಿದ್ದ, ದೇಶದ ಸಾಂಪ್ರದಾಯಿಕ ಉದ್ಯಮಗಳಾದ ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಬಟ್ಟೆ ಕೈಗಾರಿಕೆಗಳು ನಶಿಸುತ್ತಾ ಬಂದು ಜನಸಾಮಾನ್ಯರಿಗೆ ಉದ್ಯೋಗವಿಲ್ಲದಂತೆ ಆಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ವಂಚಿತ ಜನರು ಪಟ್ಟಣಗಳಿಗೆ ಬಂದು ಸಿಕ್ಕಿದಷ್ಟು ಕೂಲಿಗಾಗಿ ಉದ್ಯೋಗವನ್ನು ಮಾಡುತ್ತಿದ್ದಾರೆ.




ದೇಶದ ಶೇ. 80 ರಷ್ಟು ಕಾರ್ಮಿಕರು ದಿನಕ್ಕೆ 100 ರೂ.ಗಳಿಗಿಂತ ಕಡಿಮೆ ಕೂಲಿಯನ್ನು ಪಡೆಯುತ್ತಿದ್ದಾರೆ. 20 ಲಕ್ಷಕ್ಕೂ ಹೆಚ್ಚಿನ ಜನರು ಕುಡಿಯುವ ನೀರಿನಿಂದ ವಂಚಿತರಾಗಿದ್ದಾರೆ. 1997ರಿಂದ 2001ರ ವರೆಗಿನ 4 ವರ್ಷದ ಅವಧಿಯಲ್ಲಿ ಹಸಿವಿನಿಂದ ನರಳುವವರ ಸಂಖ್ಯೆ 17 ಲಕ್ಷದಷ್ಟು ಹೆಚ್ಚಾಗಿದೆ. ಸರ್ಕಾರಗಳು ಗುತ್ತಿಗೆ ಕಾರ್ಮಿಕ ಕಾಯಿದೆಯ 10ನೆಯ ಅಂಶವನ್ನು ತಿದ್ದುಪಡಿ ಮಾಡಿದ್ದರಿಂದ ಮಾಲೀಕರು ತಮಗಿಷ್ಟ ಬಂದಾಗ ಕಾರ್ಖಾನೆಗಳನ್ನು ಮುಚ್ಚುವುದು, ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವುದು, ಲೇಆಫ್ ಘೋಷಿಸಿದ್ದನ್ನು ಪ್ರೋತ್ಸಾಹಿಸಿದಂತಾಗಿದೆ. ಸರ್ಕಾರಗಳು ಹಾಗೂ ಮಾಲೀಕರು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಕಾರ್ಮಿಕ ಸಂಘಟನೆಗಳನ್ನು ದೂರವಿಡುತ್ತಿದ್ದಾರೆ.

ಇವುಗಳ ಬಗ್ಗೆ ಮಾಲೀಕರು ಹಲವಾರು ರೀತಿಯ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತಿದ್ದಾರೆ. ತಾವು ಜಾಗತಿಕ ಮಟ್ಟದಲ್ಲಿ ಪೈಪೋಟಿಯನ್ನು ಎದುರಿಸಬೇಕಾಗಿದೆ. ಹಲವಾರು ದೇಶಗಳು ಸ್ಪರ್ಧೆಗೆ ನಿಂತಿವೆ. ಚೈನಾ ದೇಶ ಕಮ್ಯೂನಿಸ್ಟ್ ದೇಶವಾಗಿದ್ದರೂ ಕಾರ್ಮಿಕ ಕಾನೂನುಗಳು ಸಡಿಲವಾಗಿವೆ. ಆದ್ದರಿಂದಲೇ ಅವರು ಹೆಚ್ಚಿನ ವಸ್ತುಗಳನ್ನು ಉತ್ಪಾದನೆ ಮಾಡಿ ಅಗ್ಗವಾದ ಬೆಲೆಯಲ್ಲಿ ಮಾರಲು ಸಾಧ್ಯವಾಗಿದೆ, ನಾವು ಅವರ ಜೊತೆ ಸ್ಪರ್ಧಿಸಬೇಕು ಎಂಬುದಾಗಿ ಬೊಗಳೆ ಬಿಡುತ್ತಿದ್ದಾರೆ.

ನಿಜ ಸ್ವರೂಪವೇನೆಂದರೆ, ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ತೆಗೆದುಕೊಂಡರೆ, ಭಾರತ ದೇಶದಲ್ಲಿರುವ ಕನಿಷ್ಠ ವೇತನಕ್ಕಿಂತ ಚೀನಾ ದೇಶದ ಕನಿಷ್ಠ ವೇತನ ಹೆಚ್ಚಿನದಾಗಿದೆ. ಚೀನಾ ದೇಶವು ಬೇರೆ ದೇಶಗಳಿಗೆ ತೀವ್ರ ಸ್ಪರ್ಧೆಯನ್ನು ಒಡ್ಡುತ್ತಿರುವುದು ಅಲ್ಲಿನ ಸರ್ಕಾರ ಒದಗಿಸಿರುವ ಮೂಲ ಸೌಕರ್ಯಗಳಿಂದಲೇ ಹೊರತು ಕಾರ್ಮಿಕ ಕಾನೂನುಗಳನ್ನು ಸಡಿಲಗೊಳಿಸಿದುದರಿಂದ ಅಲ್ಲ. ನಮ್ಮಲ್ಲೂ ಸಹ ಕಾರ್ಮಿಕರಿಗೆ ಉತ್ತಮ ಕೆಲಸದ ವಾತಾವರಣ ಉತ್ತಮ ಜೀವನ ಮಟ್ಟವನ್ನು ಕಲ್ಪಿಸಿದರೆ ಉತ್ಪಾದನೆಯಲ್ಲಿ ಬೇರೆ ಯಾವ ದೇಶಗಳ ಜೊತೆಗಾದರೂ ಸ್ಪರ್ಧಿಸಲು ಸಾಧ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಕಾರ್ಮಿಕರಿಗೆ ಉತ್ತಮ ಕೆಲಸದ ವಾತಾವರಣ ಸೃಷ್ಟಿಸಲು ಕಾರ್ಮಿಕ ಸಂಘಗಳ ಕೊಡುಗೆ ಅಪಾರ. ಭಾರತದಲ್ಲಿ ಮೊದಲಿನಿಂದಲೂ ಕಾರ್ಮಿಕ ಸಂಘಗಳು ಅಸ್ತಿತ್ವದಲ್ಲಿ ಇದೆ. ಜಾಗತಿಕ ಪರಿಸ್ಥಿತಿಯ ಒತ್ತಡದಿಂದ ಕಳೆದ ಹದಿನೈದು ವರ್ಷಗಳಲ್ಲಿ ಕಾರ್ಮಿಕ ಸಂಘಗಳು ತಮ್ಮ ಬಲವನ್ನು ಕಳೆದುಕೊಂಡಿವೆ. ಹಾಗೂ ರಾಜಕೀಯ ಪಕ್ಷಗಳ ಹಿತಾಸಕ್ತಿಗಾಗಿ ಕೆಲಸ ಮಾಡುತ್ತಿವೆ.

(6ನೇ ಪುಟ ನೋಡಿ)

# ಕಾರ್ಮಿಕರ ಬದುಕಿಗೆ ಹೊಸ ಇತಿಹಾಸ ಬರೆದ ಗುತ್ತಿಗೆ ಪೌರ ಕಾರ್ಮಿಕರು

ಪ್ರತೀ ದಿನ ನಾವು ಉಳಿಸಿ, ಬಿಸಾಡುವ ಬಾಟಲಿ, ಕಸ, ಕೊಳೆತ ತರಕಾರಿ, ಸಿಗರೇಟುಗಳನ್ನು ದಿನಾ ಬೆಳಗಾಗುತ್ತಲೇ ಎದ್ದು, ಗುಡಿಸಿ, ಬಾಚಿ ಹಾಕುವ ಪೌರಕಾರ್ಮಿಕರ ಬಗ್ಗೆ ನಾವೆಂದಾದರೂ ಯೋಚಿಸಿದ್ದೇವಾ? ಒಂದು ದಿನ ಕಸದ ಗಾಡಿ ಬರದಿದ್ದರೆ ಮನೆಯಲ್ಲಿ ನಾರುವ ವಾಸನೆ ಸಹಿಸುವುದಿಲ್ಲ. ಇನ್ನು ಸತ್ತ ಹೆಗ್ಗಣ, ನಾಯಿಗಳನ್ನು ಹೊತ್ತು ಹಾಕುವ ಅವರ ಬದುಕು ಹೇಗಿದೆ? ಅಂತಹದ್ದೊಂದು ಕುತೂಹಲ ನಿಮಗಿದ್ದರೆ ಅವರ ಮಾತಿನಲ್ಲೇ ಕೇಳಿ.

ಜಯಮ್ಮ : "ಗುಡ್ಸೋ ಜನ್ದಲ್ಲಿ ಹೊಲೆಮಾದಿಗರೇ ಜಾಸ್ತಿ, ಬೇರೆಯೋರು ಸ್ವಲ್ಪ ಜನ ಇದ್ದಾರೆ. ನಮ್ ಕೆಲ್ಸಕ್ಕೆ ಗೌರವ ಇಲ್ಲ. ನಿಮ್ ವಲ್ಸ್ ಎಲ್ಲಾ ಕ್ಲೀನ್ ಮಾಡ್ತೀವಿ. ನೀವು ನಮ್ಮನ್ನೇ ಕೀಳಾಗಿ ನೋಡ್ತೀರಿ. ನಾವ್ ಗುಡ್ಸೋದ್ ಬಿಟ್ರೆ ಏನ್ ಆಗ್ತೋದು ಲೆಕ್ಕ ಆಕ್ಕೋಳಿ. ನಿಮ್ಮ್ ಆರೋಗ್ಯ ಚೆನ್ನಾಗಿರೋದು ನಮ್ಮಿಂದಾನೆ ತಾನೆ? ನಮ್ ಆರೋಗ್ಯ ಚೆನ್ನಾಗಿರೋದು ಬೇಡ್ವಾ? ನಾವ್ ಬಿಸ್ಲು ಮಳೆ ಅನ್ನೇ ದುಡೀತೀವಿ. ಸರ್ಯಾದ್ ಸಂಬ್ಳ ಬೇಡ್ವಾ? ನಮ್ ಮಕ್ಳು ಚೆನ್ನಾಗಿರೋದು ಬೇಡ್ವಾ? ಕಷ್ಟ ಪಟ್ಟು ರೋಡ್ ಕ್ಲೀನ್ ಮಾಡ್ತೀವಿ. ನಾವ್ ಬಾಯಾರಿ ನೀರ್ ಕೇಟುದ್ರೆ ಕಕ್ಕಸ್ ಚೆಂಬಲ್ಲಿ ಕೊಡ್ತಾರೆ. ಅದ್ಕೆ ನಾನ್ ಕೇಳಕ್ಕೆ ಓಗಲ್ಲ. ಒಂದು ಸರ್ತಿ ಒಬ್ರು ಮನೇರು ನೀರ್ ಕೇಳಿದ್ಕೆ ಯಾವ್ ಕ್ಯಾಸ್ಟು ಅಂತ ಕೇಳಿದ್ರು, ಎಸ್ಸಿ ಕ್ಯಾಸ್ಟು ಅಂದೆ., ಹೊಲಸಲ್ಲ ಕ್ಲೀನ್ ಮಾಡೂರಲ್ವಾ ಅದಕ್ಕೆ. ಏನ್ಮಾಡೋದು ಬಾಯಾರಿದ್ದಕ್ಕೆ ಅವ್ರು ಕೊಟ್ಟ ಚೆಂಬಲ್ಲೇ ಕುಡ್ದೆ. ನಾವು ಇದ್ರೂ ಇಲ್ದಂಗೆ ನಾವ್ ಕಸಾನೇ ಗುಡ್ಸ್ಬೇದು ನಮ್ಗು ಸ್ವಾಭಿಮಾನ ಐತೆ. ನಾವೂ ಮನುಷ್ಯರು. ನಮ್ ಕೆಲ್ಸ ಕೀಳಲ್ಲ. ಬೆಳ್ಗೆ ಬೆಳ್ಗೇನೆ ಬಂದ್ ಬಿಡ್ತೀನಿ. ನಮ್ ಮಕ್ಳು ಸ್ಕೂಲಿಗೋದ್ವಾ ಬಿಟ್ವಾ ನೋಡೋರ್ಯಾರು? ಅವು ಸರ್ಯಾಗಿ ಓದಲ್ಲ, ಅದ್ಕೆ ದೊಡ್ಡೋರಾದ್ಮೇಲೆ ನಮ್ಮಿಂದೇನೆ ಪರ್ಕೆ ಹಿಡ್ಕೊಂಡು ಬರ್ತವೆ. ವಯಸ್ಸಿಗೆ ಬಂದ್ ಮಕ್ಳು ಬಿಟ್ಟು ಬರೋದೆಂಗೆ? ಸ್ಲಂಲ್ಲಿ ಪೋಲಿ ಪುಂಡ್ರು, ಅದ್ಕೆ ಬೇಗ ಮದ್ವೆ ಮಾಡ್‌ಬಿಡ್ತೀವಿ. ನಾವಿರೋ ಜಾಗ ಸರಿ ಇಲ್ಲ. ನೀರು, ಕಕ್ಕಸಿಗೆ ತೊಂದರೆ. ಕೆಲ್ಸ ಮಾಡೋ ಕಡೆ ನೀರ್ ಸಿಗಲ್ಲಂತಾನೆ ಎಲೆಅಡ್ಕೆ ಸುರು ಮಾಡ್ಕೊಂಡಿದ್ದು, ಯಾವಾಗಾರು ಕುಡಿಯೋಕೆ ಒಂದು ಮನೇರು ನೀರ್ ಕೊಡ್ತಾ ಇದ್ರು, ಆ ಮನೆ ಅಜ್ಜ ಒಬ್ಬ 'ಯವ್ವ ಯವ್ವ' ಅಂತ ಚೆನ್ನಗೇ ಮಾತಡುಸ್ತಾ ಇದ್ದಾ. ಒಂದಿನ ಕೆಲ್ಸ ಮುಗ್ಸಿ ಒಬ್ಳೆ ಓಗ್ತಾ ಇದ್ದೆ. ಆ ಮುದ್ಕ ಇಂದೇ ಇಂದೇನೆ ಬಂದು ಯಾರೂ ಇಲ್ದೇ ಇರೋ ಜಾಗ್ದಾಗೆ ಹಿಡ್ಕೋಳಕ್ಕೆ ಬಂದ. ಜೋರಾಗ್ ಕೂಗಿ ಜನಾನ್ಸ್ ಸೇರ್ಸಿ ಮಾನಾ ಕಳೀತೀನಿ ಅಂತ ಅಂದಿದ್ದಕ್ಕೇ ಕಾಲ್ಗೇ ಬೀಳ್ತೀನಿ ಅಂತ ಓಡ್ದಾ. ನಮ್ಮು ಕಷ್ಟದ್ ಜೀವ್ನಾ. ಬರೋ ಸಂಬ್ಳದಲ್ಲೇ ಎಲ್ಲ ನಡೀಬೇಕು. ಒಳ್ಳೆ ಸಂಬ್ಳ, ಗ್ಲೌಸು, ಗಂಬೂಟ್ ಎಲ್ಲಾ ಕೊಡ್ಲಿ. ನಮ್ ಕೆಲ್ಸುಕ್ಕೂ ಗೌರವಾ ಸಿಗ್ಬೇಕು. ಅದ್ಕೆ ನಾವ್ ಹೊರಡ್ತಾ ಇರೋದು"

ಇಷ್ಟೆಲ್ಲಾ ಸಮಸ್ಯೆಗಳಿಂದ ಇವರು ತಲೆ ಮೇಲೆ ಕೈ ಹೊತ್ತು ಕೂರಲಿಲ್ಲ. ತಮ್ಮ ಶಕ್ತಿ ಸಾಮರ್ಥ್ಯ, ಸಂಘಟನೆಯ ಮೇಲೆ ನಂಬಿಕೆ ಇಟ್ಟು 'ಹೊಸೂರು ಗುತ್ತಿಗೆ ಪೌರ ಕಾರ್ಮಿಕರ ಸಂಘ' ಕಟ್ಟಿದ್ದು ಆಮೇಲಿನ ಕಥೆಯನ್ನು ಅಂಜನೇಯಲು ಮಾತಿನಲ್ಲೇ ಕೇಳಿ.

**ಹೋರಾಟದ ಹಾದಿಯುತ್ತ**


ಅಂಜನೇಯಲು : "ನಾವ್ ಮೊದ್ಲು ಪರ್ಮನೆಂಟ್ ಸಂಘದೋರ ಜೊತೇಲಿ ಇದ್ವಿ. ಅವ್ರು ಕರೆಯೋ ಎಲ್ಲ ಮೀಟಿಂಗೂ ಜನ ಕರ್ಕೊಂಡು ಓಗ್ತಾ ಇದ್ವಿ. ಗುತ್ತಿ ಕಾರ್ಮಿಕರ ಸಂಬ್ಳ ಜಾಸ್ತಿ ಮಾಡುಸ್ತೀವಿ, ಪರ್ಮನೆಂಟ್ ಮಾಡುಸ್ತೀವಿ ಅಂದ್ರು, ಆದರೆ ಏನೂ ಆಗಲಿಲ್ಲ. ತುಂಬಾ ವರ್ಷ ಇದ್ವಿ ಅವ್ರ ಜೊತೇಲಿ. 96ರಲ್ಲಿ ಪಾಂಡೆ ಅವ್ರು ಕಮಿಷನರ್ ಆಗಿದ್ದಾಗ ಸಂಘ ಮಾಡ್ಕೊಂಡ್ವಿ, ಸ್ಯಾನೆ ದುಡ್ಡು ಕೈ ಬಿಟ್ಟೋಯ್ತು, ನಮ್ ಕಷ್ಟಕ್ಕೆ ನಾವೇ ಹೋರಾಡ್ಬೇಕು ಅಂತ ಸಾಲ-ಸೋಲ ಮಾಡ್ಕೊಂಡು, ಒಬ್ಬೆ ಆಡ ಇಟ್ಟು ಸಂಘ ಮಾಡುದ್ವಿ, ನಮ್ಗೆ ಓದಕ್ಕೆ ಬರ್ಯಾಕ್ಕೆ ಬರಲ್ಲ ಅದ್ಕೆ ಮೋಸ ಆಗುತ್ತೆ. ಮೊದ್ಲಿಗೆ 10 ರೂಪಾಯಿ ಕಲೆಕ್ಷನ್ ಮಾಡಿ 200 ಜನ ಮೆಂಬ್ರು ಮಾಡಿದ್ವಿ. ದುಡ್ಡಿರಲಿಲ್ಲ. ಸಂಘದ ಫೀಸು ಎತ್ತೋಕೂ ಕಷ್ಟ ಆಯ್ತು. ಕೇಶವಾ ಅವ್ರು ನಮ್ಮ ಸಂಘಕ್ಕೆ ಬಂದ್ ಮೇಲೆ ನಮ್ಗೆ ಬೇರೆ ಬೇರೆ ಜನ ಪರಿಚ್ಯ ಆದ್ರು, ತುಂಬಾ ಜನ ನಮ್ಗೆ ಸಹಾಯ ಮಾಡವ್ರೆ, ಅದ್ಕೆ ನಮ್ಗೆ ಶಕ್ತಿ ಬಂದಿದ್ದು. ನಂಗೆ ಕಾರ್ಪೋರೇಟ್ರು ಕಡೇವ್ರು ಓನರ್ಗುಳ ಕಡೇವ್ರು 5000 ಕೊಡ್ತೀವಿ ಸುಮ್ನಿರು ಅಂದ್ರು, ನಾನು ಜಗ್ಗಲಿಲ್ಲ. ತುಂಬಾ ಹೆದ್ರುಸುದ್ರು, ಒಡ್ಡೋಕೆ ನೋಡುದ್ರು, ನಾನು ಅದ್ಕೆಲ್ಲ ಎದ್ರಲ್ಲಾ. ನಮ್ ಜನಕ್ಕೆ ಒಳ್ಳೇದಾಗ್ಬೇಕು ಅಷ್ಟೆ."

ಕನಿಷ್ಠ ವೇತನ ಹಾಗೂ ಉತ್ತಮ ಕೆಲಸದ ಪರಿಸ್ಥಿತಿಗಾಗಿ ಬೆಂ.ನ.ಪಾ. ಗುತ್ತಿಗೆ ಪೌರಕಾರ್ಮಿಕರ ಸಂಘವು ಕಳೆದ 4 ವರ್ಷಗಳಿಂದ ತೀವ್ರವಾಗಿ ಹೋರಾಡುತ್ತಿದೆ. ಸಂಘವು ಹಲವಾರು ಬಾರಿ ಧರಣಿ, ಪ್ರತಿಭಟನಾ ಮೆರವಣಿಗೆಗಳನ್ನಲ್ಲದೆ ಪಾಲಿಕೆಯ ಅಧಿಕಾರಿಗಳು, ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಮಾತುಕತೆ ನಡೆಸಿದೆ. ಸಾರ್ವಜನಿಕ ಸಭೆಗಳನ್ನು, ಪತ್ರಿಕಾಗೋಷ್ಠಿಗಳನ್ನು ಹಮ್ಮಿಕೊಂಡಿದ್ದಲ್ಲದೆ ಇತರ ಚಟುವಟಿಕೆಗಳ ಮೂಲಕ ಕಾರ್ಮಿಕರ ಬೇಡಿಕೆಗಳಿಗಾಗಿ ಒತ್ತಾಯಿಸುತ್ತಿದೆ. ನಿರಂತರ ಹೋರಾಟದ ಫಲವಾಗಿ ಕಾರ್ಮಿಕ ಆಯುಕ್ತರು ದಿನಾಂಕ 16/08/2002 No. CLA/CR-34/2001/02 ರ ಗೆಜೆಟ್‌ನಲ್ಲಿ, ಈ ಹಿಂದೆ ಕನಿಷ್ಠ ವೇತನದಡಿ ಬರದಿದ್ದ ಎಲ್ಲಾ ರೀತಿಯ ಕೆಲಸಗಳಿಗೂ ಕನಿಷ್ಠ ವೇತನ ಘೋಷಿಸಿದರು. ಆ ಪ್ರಕಾರ ಗುತ್ತಿಗೆ ಪೌರಕಾರ್ಮಿಕರಿಗೆ (ಮಹಿಳೆ, ಪುರುಷರಿಗೆ ಸಮನಾಗಿ) ನಿಗದಿ ಪಡಿಸಿರುವ ಕನಿಷ್ಠ ವೇತನ ತಿಂಗಳಿಗೆ ರೂ. 1800.00 ಗುತ್ತಿಗೆ ಪೌರಕಾರ್ಮಿಕರಿಗಷ್ಟೇ ಅಲ್ಲದೆ, ರಾಜ್ಯಾದ್ಯಂತ ಕನಿಷ್ಠ ವೇತನವಿಲ್ಲದ ಎಲ್ಲಾ ಕೆಲಸಗಳಿಗೂ ಕನಿಷ್ಠವೇತನ ನಿಗದಿಯಾಗುವಂತೆ ಮಾಡುವ ಮೂಲಕ ಅನಕ್ಷರಸ್ಥ ಗುತ್ತಿಗೆ ಪೌರ ಕಾರ್ಮಿಕರ ಅಸಂಘಟಿತ ಕ್ಷೇತ್ರದಲ್ಲಿ ಹೊಸ ಇತಿಹಾಸವನ್ನೇ ಬರೆದಿದ್ದಾರೆ. □

# ನರಕಯಾತನೆ ಅನುಭವಿಸುತ್ತಿರುವ ವಾಷಿಂಗ್ ಯೂನಿಟ್ ಕಾರ್ಮಿಕರು

"ಅವರ ಮಾತಿಗೆ ಎದುರಾಡೋ ಯಾರವರೂ ಆಗಿರ್ಲಿ, ಎಲ್ಲಾ ಕೆಲಸಗಾರರ ಮಧ್ಯ ನಿಲ್ಲಿಸಿ, ಬೂಟುಗಾಲಿನಿಂದ ಒದೀತಾರೆ, ಸುತ್ತ ನಿಂತಿರೋರಿಗೆಲ್ಲಾ ನಿಮಗೂ ಇದೇ ಗತಿ ಅಂತ ಹೆದರಿಸುತ್ತಾರೆ. ಕೆಲಸದಲ್ಲಿ ಒಂದು ಚೂರು ತಪ್ಪಾದ್ರೂ ಒದೆತ ತಪ್ಪಿದ್ದಲ್ಲ. ಪ್ರೊಡಕ್ಷನ್ ಕೊಡಲಿಲ್ಲವೆಂದರೆ ಕಾಲಿನ ಮೇಲೆ ಕೋಲಿನಿಂದ ಹೊಡೀತಾರೆ. ಕಾನೂನು ಕೇಳಿದ್ರೆ ನೈಟ್ ಶಿಫ್ಟ್ ಕೆಲಸಕ್ಕೆ ಹಾಕ್ಕೊಂಡು ಮನೆಗೆ ಹೋಗುವಾಗ ರೌಡಿಗಳನ್ನು ಬಿಟ್ಟು ಹೊಡೆಸ್ತಾರೆ. ಕಾರ್ಮಿಕರಿಗೆ ಇಲ್ಲಿರುವಷ್ಟು ಕಷ್ಟ ಇನ್ನೆಲ್ಲೂ ಇಲ್ಲ."

ಸ್ನೇಹಿತರೇ, ಇದಾವುದೋ ಕಾಲದ ಕತೆಯಲ್ಲ, ನಮ್ಮಂತೆಯೇ ದುಡಿಮೆ ಮಾಡುವ ಪುರುಷ ಕಾರ್ಮಿಕರ ಅಳಲು ಎಂದರೆ ನಿಮಗೆ ಆಶ್ಚರ್ಯವಾಗುತ್ತದೆಯೇ? ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ವಿಶಿಷ್ಟವಾಗಿ ಕಾರ್ಯನಿರ್ವಹಿಸುತ್ತಿರುವ ಕಂಪನಿಯೊಂದು ಒಂದೇ ಸೂರಿನಡಿ ಮಾಡಬಹುದಾದಂತಹ ಕಟಿಂಗ್, ಪ್ರೊಡಕ್ಷನ್ಸ್, ಫಿನಿಷಿಂಗ್ ಕೆಲಸಗಳನ್ನು ಬೇರೆಬೇರೆ ಯೂನಿಟ್‌ಗಳಲ್ಲಿ ಮಾಡಿಸುತ್ತಿದೆ. ಈ ಕಾರ್ಖಾನೆಯ ವಾಶಿಂಗ್ ಯೂನಿಟ್‌ನಲ್ಲಿ ಕಾರ್ಮಿಕರನ್ನು ಈ ರೀತಿ ಚಿತ್ರಹಿಂಸೆಗೊಳಪಡಿಸಲಾಗುತ್ತಿದೆ.




ಬೆಂಗಳೂರಿನಲ್ಲಿ 1000 ಕ್ಕಿಂತಲೂ ಹೆಚ್ಚು ಗಾರ್ಮೆಂಟ್ಸ್ ಕಾರ್ಖಾನೆಗಳಿದ್ದು, ಈ ಕಾರ್ಖಾನೆಗಳಿಗೆ ಪೂರಕವಾಗಿ ಹಲವಾರು ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಇವುಗಳಲ್ಲಿ ಮುಖ್ಯವಾದುದು ವಾಷಿಂಗ್ ಯೂನಿಟ್‌ಗಳು. ಈ ಹಿಂದೆ ಈ ವಾಷಿಂಗ್ ಯೂನಿಟ್‌ಗಳನ್ನು ಬೇರೆ ಬೇರೆ ಬಂಡವಾಳದಾರರು ನಡೆಸುತ್ತಿದ್ದರು.

ಆದರೆ ಈಗ ಪರಿಸ್ಥಿತಿ ಬದಲಾಗಿ ಹಲವು ದೊಡ್ಡ ದೊಡ್ಡ ಗಾರ್ಮೆಂಟ್ಸ್ ಕಾರ್ಖಾನೆಗಳ ಮಾಲೀಕರು ವಾಷಿಂಗ್ ಯೂನಿಟ್‌ಗಳನ್ನು ತಾವೇ ಪ್ರಾರಂಭ ಮಾಡಿದ್ದಾರೆ. ಈ ಯೂನಿಟ್‌ಗಳಲ್ಲಿ ಪುರುಷ ಕಾರ್ಮಿಕರು ಹೆಚ್ಚಾಗಿ ಕೆಲಸ ಮಾಡುತ್ತಿದ್ದು, 3 ಪಾಳಿಗಳಲ್ಲಿ ಕೆಲಸ ನಡೆಯುತ್ತಿದೆ. ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ 4 ಗಾರ್ಮೆಂಟ್ಸ್ ಯೂನಿಟ್‌ಗಳನ್ನು ಹೊಂದಿರುವ ಕಾರ್ಖಾನೆಯು ತನ್ನದೇ ಆದ ವಾಷಿಂಗ್ ಯೂನಿಟ್ ಹೊಂದಿದೆ. ಈ ಯೂನಿಟ್ ನಲ್ಲಿ 1500 ಮಂದಿ ಕಾರ್ಮಿಕರು ಮೂರು ಪಾಳಿಗಳಲ್ಲಿ ದುಡಿಯುತ್ತಿದ್ದಾರೆ. ಈ ಕಾರ್ಮಿಕರು ದೂರದ ಊರುಗಳಾದ ಗುಲ್ಬರ್ಗ, ಚಿತ್ರದುರ್ಗ, ದಾವಣಗೆರೆ, ಹಾಸನ, ಚಿಕ್ಕಮಗಳೂರು, ರಾಯಚೂರು, ಮುಂತಾದ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಕೆಲಸಕ್ಕಾಗಿ ಬಂದು ದುಡಿಯುತ್ತಿದ್ದಾರೆ. ಈ ಕಾರ್ಮಿಕರು ನಗರಕ್ಕೆ ಹೊಸಬರಾಗಿರುವುದರಿಂದ ಮತ್ತು ಕೆಲಸ ಮಾಡುವುದು ಅನಿವಾರ್ಯವಾದ್ದರಿಂದ ಇಲ್ಲಿ ಕೆಲಸಕ್ಕೆ ಸೇರುತ್ತಾರೆ. ಇಂತಹ ಕಾರ್ಮಿಕರನ್ನು ಹಲವಾರು ರೀತಿಯಲ್ಲಿ ಶೋಷಣೆ ಹಾಗೂ ದೌರ್ಜನ್ಯಕ್ಕೊಳಪಡಿಸುತ್ತಿರುವ ಈ ಕಾರ್ಖಾನೆಯ ಆಡಳಿತ ವರ್ಗವು ವಾಷಿಂಗ್ ಯೂನಿಟ್ ಅನ್ನು ಮುಂಬೈನಿಂದ ಬಂದಿರುವ ಒಬ್ಬ ಲ್ಯಾಂಡ್ರಿ ಮ್ಯಾನೇಜರ್ ಕೈಗೆ ಒಪ್ಪಿಸಿದೆ. ಇಲ್ಲಿನ ಕಾರ್ಮಿಕರ ಪರಿಸ್ಥಿತಿ ಹಸಿವೆಂಬ ಬಾಣಲೆಯಿಂದ ಚಿತ್ರ ಹಿಂಸೆಯೆಂಬ ಬೆಂಕಿಗೆ ಬಿದ್ದಂತಾಗಿದೆ.

**ಈ ಲ್ಯಾಂಡ್ರಿ ಮ್ಯಾನೇಜರ್ ಕಾರ್ಮಿಕರಿಗೆ ನೀಡುತ್ತಿರುವ ಹಿಂಸೆಯ ಕೆಲ ಮಾದರಿಗಳು**

- ತನ್ನ ಮಾತಿಗೆ ಎದುರಾಡಿವ ಯಾವುದೇ ಕಾರ್ಮಿಕರನ್ನು ಇತರೆ ಕಾರ್ಮಿಕರ ಮಧ್ಯದಲ್ಲಿ ನಿಲ್ಲಿಸಿ ಅವನ ಬಟ್ಟೆಯನ್ನು ಬಿಚ್ಚಿಸಿ ಹೊಡೆಯುವುದು, ಶೂ ಕಾಲಿನಿಂದ ಒದೆಯುವುದು, ಮತ್ತು ಸುತ್ತ ನಿಂತಿರುವ ಕಾರ್ಮಿಕರಿಗೆ ನೀವು ಯಾರಾದರೂ ಹಿಂದಿರುಗಿ ಮಾತನಾಡಿದರೆ ಇದೇ ಪರಿಣಾಮ ಎಂದು ಎಚ್ಚರಿಸುವುದು.
- ಪ್ರತಿ ಗಂಟೆಗೂ ಸರಿಯಾಗಿ ಪ್ರೊಡಕ್ಷನ್ ಕೊಡದಿದ್ದರೆ ಕೈಯಲ್ಲಿ ಕಡ್ಡಿಯನ್ನು ಹಿಡಿದು ಕಾಲುಗಳ ಮೇಲೆ ಹೊಡೆಯುವುದು, ಪ್ರೊಡಕ್ಷನ್ ಕೊಡುವವರೆಗೆ ಕಾರ್ಖಾನೆಯಿಂದ ಹೊರಗೆ ಕಳುಹಿಸದಿರುವುದು
- ಊಟಕ್ಕೆ ನಿರ್ದಿಷ್ಟ ಸಮಯವಿಲ್ಲ, ಮ್ಯಾನೇಜರ್‌ಗೆ ಇಷ್ಟ ಬಂದಾಗ ಊಟಕ್ಕೆ ಬಿಡುವುದು, ಎಷ್ಟೇ ಹಸಿದಿದ್ದರೂ ಊಟಕ್ಕೆ ಹೋಗುವ ಹಾಗಿಲ್ಲ.
- ಶೌಚಾಲಯಗಳ ಬಾಗಿಲಿಗೆ ಬೀಗ ಹಾಕಿಸಿ ನಿಗದಿತ ಸಮಯದಲ್ಲಿ ಬೀಗವನ್ನು ತೆಗೆಸುವುದು.
- ಕಾರ್ಮಿಕರ ಜೊತೆ ಮಾತನಾಡುವಾಗ ಅವಾಚ್ಯ ಶಬ್ದಗಳನ್ನು ಉಪಯೋಗಿಸುವುದು
- ಸುಮಾರು 50 ರಿಂದ 75 ಕೆಜಿ ಯವರಿಗಿನ ಬಟ್ಟೆಯ ಬ್ಯಾಗುಗಳನ್ನು ಕತ್ತೆಯ ಮೇಲೆ ಹೇರಿದಂತೆ ಹೇರಿ ಸಾಗಿಸುವುದು.
- ಕೆಲಸ ಮಾಡುವಾಗ ಸಣ್ಣ ಸಣ್ಣ ತಪ್ಪುಗಳಾದಲ್ಲಿ, ಶೂ ಕಾಲಿನಿಂದ ಒದೆಯುವುದು
- ಕೆಲಸಕ್ಕೆ ಸೇರುವ ಸಂದರ್ಭದಲ್ಲಿ ವಾಸಿಸುವ ವಿಳಾಸ, ಮನೆಯ ವಿಳಾಸ ತೆಗೆದುಕೊಂಡು 10 ರಿಂದ 15 ಕಡೆ ಸಹಿ ತೆಗೆದುಕೊಳ್ಳುವುದು.
- ಸ್ಥಳೀಯ ಕಾರ್ಮಿಕರು ಧೈರ್ಯದಿಂದ ಈ ದೌರ್ಜನ್ಯವನ್ನು ಪ್ರಶ್ನಿಸಿದರೆ ಅಂತಹವರನ್ನು 2ನೇ ಪಾಳಿಗೆ ಹಾಕಿಕೊಂಡು ರಾತ್ರಿ 12 ಅಥವಾ 1 ಗಂಟೆಗೆ ಮನೆಗೆ ಕಳುಹಿಸುವುದು, ಮನೆಗೆ ಹೋಗುವ ಸಂದರ್ಭದಲ್ಲಿ ಬಾಡಿಗೆ ಗೂಂಡಾಗಳನ್ನು ಗೊತ್ತು ಮಾಡಿ ಕಾರ್ಮಿಕರ ಮೇಲೆ ಹಲ್ಲೆ ನಡೆಸುವುದು
- ಕಾರ್ಖಾನೆಯ ಸೂಚನಾ ಫಲಕದಲ್ಲಿ ನಮೂದಿಸಿರುವ ಯಾವುದೇ ಕಾನೂನುಗಳನ್ನು ಇಲ್ಲಿ ಪಾಲಿಸುವುದಿಲ್ಲ.
- ಕಾರ್ಮಿಕರ ಕೆಲಸದ ದರ್ಜೆಯನ್ನು ಕೆಳಗಿಳಿಸುವ ಮೂಲಕ ಅವಮಾನಿಸಿ ಕೆಲಸವನ್ನು ಬಿಡುವಂತೆ ಮಾಡುವುದು. (ಉದಾಹರಣೆ : ಇಬ್ಬರು ಕಂಪ್ಯೂಟರ್ ಆಪರೇಟರ್‌ಗಳನ್ನು ಲ್ಯಾಂಡ್ರಿ ಕೆಲಸ ಮಾಡಲು ವರ್ಗಾಯಿಸಿರುವುದು. ಲ್ಯಾಂಡ್ರಿ ಮೇಲ್ವಿಚಾರಕರೊಬ್ಬರನ್ನು ಕಸಗುಡಿಸುವ ಕೆಲಸಕ್ಕೆ ವರ್ಗಾಯಿಸಿದ್ದು)

ಮುಖ್ಯವಾದ ಅಂಶವೆಂದರೆ, ಸ್ಥಳೀಯರೂ ಇವರ ವಿರುದ್ಧ ಮಾತನಾಡಲು ಹೆದರುತ್ತಾರೆ. ಇವರ ನಡವಳಿಕೆಯನ್ನು ಪಿಸುದನಿಯಲ್ಲಿ ವಿವರಿಸುತ್ತಾರೆ. ಏಕೆಂದರೆ ಹಣವಿದ್ದರೆ ಏನು ಬೇಕಾದರೂ ಮಾಡುತ್ತಾರೆ. ಪೊಲೀಸರು ಅವರ ಕೈಯಲ್ಲಿದ್ದಾರೆ, ಸರ್ಕಾರವೇ ಅವರ ಪರವಾಗಿದೆ ಎಂದು ಹೇಳುತ್ತಾರೆ.

ಕಾರ್ಮಿಕರೇ ಇನ್ನಾದರೂ ಎಚ್ಚರಗೊಳ್ಳಿ, ಹೆದರುವ ಕಾರಣವಿಲ್ಲ. ನಿಮ್ಮ ಮೇಲಿನ ದೌರ್ಜನ್ಯಗಳನ್ನು ಧೈರ್ಯವಾಗಿ ಪ್ರಶ್ನಿಸಿ. ನಿಮಗೆ ಬೆಂಬಲವಾಗಿ GATWU – ಗಾರ್ಮೆಂಟ್ಸ್ ಅಂಡ್ ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್ ಇದೆ. ಅಗತ್ಯವಿದ್ದಲ್ಲಿ ಸಂಪರ್ಕಿಸಿ. ದೂರವಾಣಿ : 9449506451 □

# ಮಾಹಿತಿ ಹಕ್ಕು 2005

ಸ್ವಾತಂತ್ರ್ಯ ಬಂದ 58 ವರ್ಷಗಳ ನಂತರ, ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಆಡಳಿತ ಶಾಹಿಯ ಕೆಲಸಗಳನ್ನು ಪ್ರಶ್ನಿಸುವ, ಅವರಿಂದ ಮಾಹಿತಿಯನ್ನು ಪಡೆಯುವ ಅತ್ಯಂತ ಪರಿಣಾಮಕಾರಿಯಾದ ಅಸ್ತ್ರವಾಗಿರುವ ಮಾಹಿತಿ ಹಕ್ಕು ಕಾಯ್ದೆ ಅಕ್ಟೋಬರ್ 12, 2005 ರಂದು ದೇಶಾದ್ಯಂತ (ಜಮ್ಮು ಮತ್ತು ಕಾಶ್ಮೀರವನ್ನು ಹೊರತು ಪಡಿಸಿ) ಜಾರಿಗೆ ಬಂದಿದೆ.

ಇಂದು ಯಾವುದೇ ಸಾರ್ವಜನಿಕ ಸೇವೆಗೆ ಸಂಬಂಧಿಸಿದ ದಾಖಲೆ ಇರಲಿ ಅಥವಾ ಸ್ಥಳೀಯ ಆಡಳಿತ ಸಂಸ್ಥೆಯ, ಪ್ರಾಧಿಕಾರಗಳ ಯೋಜನೆಗಳಿಗೆ ಸಂಬಂಧಿಸಿದ ದಾಖಲೆಗಳ ವಿವರವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಪ್ರತಿಯೊಂದು ನಮ್ಮಲ್ಲಿ ರಹಸ್ಯ ನಾಗರೀಕರು ಪಡೆಯುವ ಯಾವುದೇ ಸೇವೆ, ಸೌಲಭ್ಯ ಹಾಗೂ ಯೋಜನೆಗಳು ಪಡೆಯಲು ಲಂಚ ತೆರಬೇಕಾಗಿರುವುದು ಇಂದು ಸರ್ವೇ ಸಾಮಾನ್ಯ. ಮಾಹಿತಿ ಹಕ್ಕು 2005 ಕಾಯಿದೆಯನ್ನು ನಾಗರೀಕರು ಸಂಪೂರ್ಣವಾಗಿ ತಿಳಿದು ಅದು ಚಲಾಯಿಸಿದ್ದೆ ಆದಲ್ಲಿ, ಇಡೀ ವ್ಯವಸ್ಥೆಯ ಸ್ವರೂಪವನ್ನು ಸಂಪೂರ್ಣವಾಗಿ ಬದಲಾಯಿಸುವಂತಹ ಸಾಧ್ಯತೆ ಇದೆ. ನಿಜವಾದ ಅರ್ಥದಲ್ಲಿ ಮಾಹಿತಿ ಹಕ್ಕು ಈ ದೇಶದ ಪ್ರತಿಯೊಬ್ಬ ಪ್ರಜೆಗೂ ಇರಬೇಕು. ಏಕೆಂದರೆ, ನಮ್ಮ ಸಂವಿಧಾನದ 19 (1)(A) ಅನುಚ್ಛೇದ ನಮಗೆ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳಲ್ಲಿ ಮಾಹಿತಿ ಪಡೆಯುವ ಹಕ್ಕು ಸಹ ಸೇರಿದೆ. ಈ ಹಕ್ಕುಗಳನ್ನು ಚಲಾಯಿಸಲು ನಾಗರೀಕರಿಗೆ ಅಗತ್ಯವಾಗಿರುವುದು ಜ್ಞಾನ ಹಾಗೂ ಮಾಹಿತಿ, ಏಕೆಂದರೆ ಪೂರ್ಣ ಮಾಹಿತಿಯುಳ್ಳ ವ್ಯಕ್ತಿ ತನ್ನ ಕರ್ತವ್ಯವನ್ನು ಸರಿಯಾದ ರೀತಿ ನೇರವೇರಿಸಬಲ್ಲ. ಭಾರತ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದರಿಂದ ಮಾಹಿತಿ ಪಡೆಯುವ ಹಕ್ಕು ಬಡವರ, ಅವಿದ್ಯಾವಂತ ಅನಕ್ಷರಸ್ಥ ಹಾಗೂ ದುರ್ಬಲ ವರ್ಗದವರಿಗೆ ವರವಾಗಿ ಪರಿಣಮಿಸಿದೆ.

ನಾಗರೀಕರಿಗಿರುವ ಈ ಹಕ್ಕು ಆಡಳಿತ ಶಾಯಿಗಳ ಕಾರ್ಯ ನಿರ್ವಹಣೆಯಲ್ಲಿ ಪಾರದರ್ಶಕತೆ ಹಾಗೂ ಜವಾಬ್ದಾರಿ ಗುಣಗಳನ್ನು ಹೆಚ್ಚಿಸುವ ಮೂಲಕ ಸರ್ಕಾರಿ ಹಾಗೂ ಖಾಸಗಿಯವರ ಆಡಳಿತದಲ್ಲಿ ಅಧಿಕಾರ ದುರುಪಯೋಗ, ದುರಾಡಳಿತ, ಗೌಪ್ಯತೆ ಹಾಗೂ ಭ್ರಷ್ಟಾಚಾರವನ್ನು ತೊಡೆದು ಹಾಕುವಲ್ಲಿ, ನಿರ್ಣಾಯಕ ಪಾತ್ರ ವಹಿಸುತ್ತದೆ. ಹಾಗಾದರೆ ನಮ್ಮೆಲ್ಲರಿಗೂ ಈ ಹಕ್ಕಿನ ಕುರಿತು ಈ ಕೆಳಕಂಡ ವಿಷಯಗಳನ್ನು ತಿಳಿಯುವುದು ಸೂಕ್ತವಾಗಿದೆ.

- **ಮಾಹಿತಿ ಹಕ್ಕಿನ ಅನುಷ್ಠಾನದಲ್ಲಿ ಸಾರ್ವಜನಿಕ ಪ್ರಾಧಿಕಾರಗಳ ಜವಾಬ್ದಾರಿ/ ಹೊಣೆಗಾರಿಕೆ**

  ಮಾಹಿತಿ ಹಕ್ಕಿನ ಅನುಷ್ಠಾನದಲ್ಲಿ ಸಾರ್ವಜನಿಕ ಪ್ರಾಧಿಕಾರಗಳ ಜವಾಬ್ದಾರಿ (ಹೊಣೆಗಾರಿಕೆ) ಸಾರ್ವಜನಿಕ ಪ್ರಾಧಿಕಾರಗಳು ಕೆಲವೊಂದು ಮಾಹಿತಿಗಳನ್ನು ಸ್ವಯಂಪ್ರೇರಿತವಾಗಿ ಪ್ರಕಟಿಸಬೇಕು. ಈ ಮಾಹಿತಿಗಳು ಸುಮಾರು 17 ಅಂಶಗಳನ್ನು ಒಳಗೊಂಡಿದೆ. ಈ ಕೆಲಸವನ್ನು ಸಾರ್ವಜನಿಕ ಪ್ರಾಧಿಕಾರಗಳು ಕಾಯಿದೆಯ ಅನುಷ್ಠಾನಕ್ಕೆ ಬಂದ 120 ದಿನಗಳ ಒಳಗೆ ಕೈಗೊಳ್ಳಲು ಅನುಸರಿಸುವ ವಿಧಾನ, ಕಡತಗಳ ವಿವರ, ಸಿಬ್ಬಂದಿಗಳು ಪಡೆಯುವ ಸಂಬಳ, ಭತ್ಯೆಗಳೂ ಇತ್ಯಾದಿ ವಿವರಗಳನ್ನು ಪ್ರಕಟಿಸಬೇಕು. ಮುಖ್ಯವಾಗಿ ಇಲಾಖೆಗಳು ಮತ್ತು ಕಛೇರಿಗಳಿಗೆ ಮಂಜೂರಾದ ಹಣದ ವಿವರಗಳನ್ನು ಪ್ರಕಟಿಸಬೇಕು.

- **ಮಾಹಿತಿ ಪಡೆಯಲು ಇಚ್ಛಿಸಿದ್ದಲ್ಲಿ ಸಂಬಂಧಪಟ್ಟ ಇಲಾಖೆಯು/ ಪ್ರಾಧಿಕಾರದ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಬರಹದಲ್ಲಿ ಕೋರಿಕೆಯನ್ನು ಸಲ್ಲಿಸಿ.**
  - ಈ ಕಾಯಿದೆಯ ಪ್ರಕಾರ ವ್ಯಕ್ತಿಯ ಸಂಬಂಧಿಸಿದ ಇಲಾಖೆಯ ಯಾವುದೇ ದಾಸ್ತಾವೇಜು, ಹಸ್ತಪ್ರತಿ ಮತ್ತು ಕಡತವನ್ನು
  - ಯಾವುದೇ ದಾಸ್ತಾವೇಜಿನ ಮೈಕ್ರೋ ಫಿಲ್ಮ್, ಮೈಕ್ರೋ ಫಿಶ್ ಮತ್ತು ಪಡಿಯಚ್ಚು ಪ್ರತಿಯನ್ನು.
  - ಅಂತಹ ಮೈಕ್ರೋ ಫಿಲ್ಮ್‌ನಲ್ಲಿ (ಗಾತ್ರವನ್ನು ವಿಸ್ತರಿಸಿರಲಿ ಅಥವಾ ವಿಸ್ತರಿಸದಿರಲಿ) ಸಾಕಾರಗೊಳಿಸುವ ಪ್ರತಿರೂಪ (ಇಮೇಜ್) ಅಥವಾ ಪ್ರತಿರೂಪಗಳ ಮರುಪಾವತಿ ಮಾಡುವುದನ್ನು
  - ಗಣಕ ಯಂತ್ರ ಅಥವಾ ಯಾವುದೇ ಇತರ ಸಾಧನದ ಮೂಲಕ ಸಿದ್ಧಪಡಿಸಲಾದ ಯಾವುದೇ ಇತರ ವಿಷಯ ಸಾಮಗ್ರಿಯನ್ನು ಹಾಗೂ ಕಾಯಿದೆಯ ಪ್ರಕಾರ ಮಾಹಿತಿಯಲ್ಲಿ ಇಲಾಖೆಗಳಿಗೆ ಸಂಬಂಧಿಸಿದ ದಾಖಲೆ, ದಾಸ್ತವೇಜು, ಕಾಗದ, ಪತ್ರ, ಮೆಮೋ ಪತ್ರಿಕಾ ವರದಿ, ಇಮೇಲ್, ಸ್ಯಾಂಪಲ್, ಸಲಹೆ, ಸೂಚನೆ, ಆದೇಶ, ಗುತ್ತಿಗೆ, ಇತ್ಯಾದಿಗಳೆಲ್ಲವೂ ಸೇರಿದೆ.

- **ನೀವು ಕೋರಿದ ಮಾಹಿತಿಯನ್ನು ಅವರು ನಿಮಗೆ 30 ದಿನಗಳೊಳಗೆ ಒದಗಿಸಬೇಕು.**
  - ಪ್ರತಿಯೊಂದು ಇಲಾಖೆ/ ಸಾರ್ವಜನಿಕ ಪ್ರಾಧಿಕಾರವು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿಯನ್ನು ನೇಮಿಸಿದ್ದು ಅವರು 30 ದಿನಗಳ ಒಳಗಾಗಿ ಮಾಹಿತಿ ನೀಡುತ್ತಾರೆ ಇಲ್ಲವೇ ಸಂಬಂಧಪಟ್ಟ ಅರ್ಜಿಯ ಕುರಿತು ವಿವರವನ್ನು ನೀಡುತ್ತಾರೆ.

- **ಮಾಹಿತಿ ಪಡೆಯಲು ಇಲಾಖೆ ನಿಗಧಿ ಪಡಿಸಿರುವ ಕನಿಷ್ಟ ಶುಲ್ಕವನ್ನು ತೆರಬೇಕಾಗುತ್ತದೆ.**
  - ಕೇಂದ್ರ ಮತ್ತು ಕರ್ನಾಟಕ ರಾಜ್ಯ ಸರ್ಕಾರಗಳು ಕಾಯಿದೆ ಅನ್ವಯ ನಿಗಧಿ ಪಡಿಸಿದ ಶುಲ್ಕ ವಿವರ ಹೀಗಿದೆ.
  - ಅಧಿನಿಯಮದ ಉಪಪ್ರಕರಣದ ಅಡಿಯಲ್ಲಿ ಮಾಹಿತಿಯನ್ನು ಪಡೆಯಲು ಇಚ್ಛಿಸುವ ಯಾವುದೇ ವ್ಯಕ್ತಿಯ ನಮೂನೆ ಎ ಎಲ್ಲಿ ಅಥವಾ ನಮೂನೆ ನಿರ್ದಿಷ್ಟಪಡಿಸಿದ ಎಲ್ಲಾ ದಾಖಲೆಗಳನ್ನು (ವಿವರಗಳನ್ನು) ಸಾಧ್ಯವಾದಷ್ಟು ಮಟ್ಟಿಗೆ ಒಳಗೊಂಡಿದೆ. ಇನ್ಯಾವುದೇ ನಮೂನೆಯಲ್ಲಿ ಒಂದು ಅರ್ಜಿಯನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ ಇವರಿಗೆ 10 ರೂಗಳ ಪ್ರಾರಂಭಿಕ ಶುಲ್ಕದೊಡನೆ ಸಲ್ಲಿಸತಕ್ಕದ್ದು. ಅಧಿನಿಯಮದ ಅಡಿಯಲ್ಲಿ ಕೋರಿಕೆಗಳನ್ನು ಸ್ವೀಕರಿಸುವ ಪ್ರತಿಯೊಬ್ಬ ಅಧಿಕಾರಿಯು ಒಂದು ಸ್ವೀಕೃತಿ ನಡೆಸತಕ್ಕದ್ದು.
  - ಮಾಹಿತಿಯನ್ನು ನೀಡುವುದಕ್ಕಾಗಿ, A4 ಅಳತೆಯ ಕಾಗದದ ಹಾಳೆಯಲ್ಲಿ ಪಡೆಯುವ ವಿವರಗಳಿಗೆ ಪ್ರತಿ ಪುಟಕ್ಕೆ ರೂ. 2/- ಶುಲ್ಕ ವಿಧಿಸತಕ್ಕದ್ದು.
  - ಮಾಹಿತಿಯನ್ನು ನೀಡುವುದಕ್ಕಾಗಿ ಭೂಪಟಗಳು ನಕ್ಷೆಗಳು, ವರದಿಗಳು, ಆಂಶಿಕ ದಾಖಲೆ ಅಥವಾ ಯಾವುದೇ ತಾಂತ್ರಿಕ ಮಾಹಿತಿ ಅಥವಾ ನಮೂನೆ ಮತ್ತು ಮಾದರಿಗಳ ಸಂಬಂಧಪಟ್ಟಿದಲ್ಲಿ ಬಳಸಲಾದ ಶ್ರಮ ಮತ್ತು ಸಾಮಗ್ರಿಗಳ ವೆಚ್ಚಕ್ಕೆ ಪ್ರತಿಯೊಂದು ಸಂದರ್ಭದಲ್ಲಿ ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೂಕ್ತ ಶುಲ್ಕವನ್ನು ನಿಗಧಿ ಪಡಿಸಿರುತ್ತಾರೆ.
  - ಮಾಹಿತಿಯನ್ನು ಡಿಸ್ಕ್ ಅಥವಾ ಫ್ಲಾಪಿ ಅಥವಾ ಸಿ.ಡಿ. ಇನ್ಯಾವುದೆ ವಿದ್ಯುನ್ಮಾನ ಸಾಧ್ಯದ ಮೂಲಕ ನೀಡಲು ಶುಲ್ಕವು ರೂ. 50 ಆಗಿರುತ್ತದೆ.
  - ಶುಲ್ಕವನ್ನು ರಾಜ್ಯ ಸಾರ್ವಜನಿಕ ಮಾಹಿತಿ ಅಧಿಕಾರಿಯವರ ಹೆಸರಿನಲ್ಲಿ ಪಡೆದ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಡಿಡಿ ಅಥವಾ ಬ್ಯಾಂಕರ್ಸ್ ಚೆಕ್ ಅಥವಾ ಪೆ ಆರ್ಡರ್ ರೂಪದಲ್ಲಿ ನಗದಾಗಿ ಅಥವಾ ಕರ್ನಾಟಕ ಆರ್ಥಿಕ ಸಂಹಿತೆ ಅನುಸಾರವಾಗಿ ಖಜಾನೆಯಲ್ಲಿ

ಸಂಗ್ರಹಿಸಲಾಗುತ್ತದೆ. ಮಾಹಿತಿಯನ್ನು ಪಡೆಯಲಿಚ್ಛಿಸುವ ವ್ಯಕ್ತಿಯು ಬಡತನದ ರೇಖೆಗಿಂತ ಕೆಳಗಿರುವವರ ಪ್ರವರ್ಗಕ್ಕೆ ಸೇರಿದವರಾಗಿದ್ದಲ್ಲಿ ಯಾವುದೇ ಶುಲ್ಕ ತೆರುವಂತಿಲ್ಲ.

- **ಮಾಹಿತಿ ನಿರಾಕರಣೆಗೆ ಕಾರಣ ಅಥವಾ ಕಾಯಿದೆ ಮುಕ್ತ ಅಂಶಗಳು:**
  - ಕಾಯಿದೆಯ ಪ್ರಕಾರ ಮಾಹಿತಿಯನ್ನು ಒದಗಿಸುವುದರಿಂದ ರಾಜ್ಯವನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯು ಹೊಂದಿರುವ ಕೃತಿ ಸ್ವಾಮ್ಯದ ಉಲ್ಲಂಘನೆ ಆಗಬಹುದಾದಲ್ಲಿ ಮಾಹಿತಿಗಾಗಿ ಮಾಡಿದ ಕೋರಿಕೆಯನ್ನು ನಿರಾಕರಿಸಬಹುದು.
  - ಕಾಯಿದೆ ಅನ್ವಯ ಯಾವ ಮಾಹಿತಿ ನೀಡಲಾಗುವುದಿಲ್ಲ ಎಂಬುದನ್ನು ಹನ್ನೊಂದು ರೀತಿಯಲ್ಲಿ ವಿವರಿಸಲಾಗಿದೆ. ಈ ಮಾಹಿತಿಯನ್ನು ಏಕೆ ನಿರಾಕರಿಸಲಾಗಿದೆ ಎಂಬುದನ್ನು ಅರ್ಜಿದಾರರಿಗೆ ತಿಳಿಸತಕ್ಕದ್ದು. ಘಟನೆ ಸಂಭವಿಸಿದ 20 ವರ್ಷದ ನಂತರ ಎಲ್ಲಾ ವಿಷಯದ ಬಗ್ಗೆಯೂ ಮಾಹಿತಿಯನ್ನು ನೀಡಲಾಗುವುದು. ಆದರೆ ಯಾವುದಾದರೂ ಮಾಹಿತಿ ನೀಡುವುದರಿಂದ ದೇಶದ ಸುಭದ್ರತೆಗೆ ಧಕ್ಕೆ ಉಂಟುಮಾಡುವಂತಿದ್ದರೆ ಅದನ್ನು ನಿರಾಕರಿಸಲಾಗುವುದು. ಭದ್ರತಾ ಪಡೆ ಸೇರಿದಂತೆ ಕೆಲವೊಂದು ಸಂಸ್ಥೆಗಳನ್ನು ಈ ಕಾಯಿದೆಯಿಂದ ಮುಕ್ತಗೊಳಿಸಲಾಗಿದ್ದು, ಈ ಸಂಸ್ಥೆಗಳು ಸಹ ಮಾನವ ಹಕ್ಕು ಉಲ್ಲಂಘನೆ ಹಾಗೂ ಭ್ರಷ್ಟಚಾರದ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ.

- **ಕೇಂದ್ರ ಹಾಗೂ ರಾಜ್ಯ ಮಾಹಿತಿ ಆಯೋಗ**

  ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಮಾಹಿತಿ ಆಯೋಗವು ರಚಿಸಲ್ಪಟ್ಟಿದ್ದು, 2 ಹಂತಗಳಲ್ಲಿ ಒಬ್ಬ ಮುಖ್ಯ ಮಾಹಿತಿ ಆಯುಕ್ತರು ಹಾಗೂ 10 ಮಾಹಿತಿ ಆಯುಕ್ತರು, ನೇಮಕಗೊಂಡಿರುತ್ತಾರೆ. ಸಾರ್ವಜನಿಕರಿಂದ ಮಾಹಿತಿ ಕಾಯಿದೆಯ ಅನುಷ್ಠಾನದ ಬಗ್ಗೆ ಬರುವ ಕುಂದು ಕೊರತೆಗಳನ್ನು ಮತ್ತು ದೂರುಗಳನ್ನು ನಿರ್ವಹಿಸುವುದು ಇವರ ಕರ್ತವ್ಯವಾಗಿದೆ.ಇವರಿಗೆ ಸಿವಿಲ್ ನ್ಯಾಯಾಲಯದ ಅಧಿಕಾರ ನೀಡಲಾಗಿದೆ. ಮಾಹಿತಿ ಹಕ್ಕು ಕಾಯಿದೆಯ ಆಚರಣೆ ಮತ್ತು ಅನುಷ್ಠಾನದ ಕುರಿತು ವರದಿಯನ್ನು ನೀಡುವುದು ಇವರ ಜವಾಬ್ದಾರಿ.

- **ಮೇಲ್ಮನವಿಗೆ ಅವಕಾಶ**

  ಮೇಲ್ಮನವಿಗೆ 2 ರೀತಿಯ ಅವಕಾಶಗಳಿವೆ, ನಿಗಧಿಪಡಿಸಿದ ದಿನಗಳ ಒಳಗಾಗಿ ಸಂಬಂಧಿಸಿದ ಅರ್ಜಿಯ ಕುರಿತು ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿ ವಿರುದ್ಧ ಅವರ ತಕ್ಷಣದ ಹಿರಿಯರ ಅಧಿಕಾರಿ ವಿರುದ್ಧ ಅವರ ತಕ್ಷಣದ ಹಿರಿಯರ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಬಹುದು. ಇದು ಆಂತರಿಕ ಮೇಲ್ಮನವಿ ಇದನ್ನು 30 ದಿನಗಳಲ್ಲಿ ತೀರ್ಮಾನಿಸತಕ್ಕದ್ದು, ಇದಾದ ನಂತರ 2ನೇ ಯದ್ದು ಬಾಹ್ಯ ಮೇಲ್ಮನವಿಯನ್ನು ರಾಜ್ಯ ಅಥವಾ ಕೇಂದ್ರ ಮಾಹಿತಿ ಆಯುಕ್ತರಲ್ಲಿ ಸಲ್ಲಿಸಬಹುದು. ಈ ಅಂತದಲ್ಲಿ ಅರ್ಜಿಯನ್ನು 90 ದಿನಗಳ ಅವಧಿಯಲ್ಲಿ ಇತ್ಯರ್ಥಗೊಳಿಸತಕ್ಕದ್ದು. ಕಾಯಿದೆಯ ಅನುಸಾರ ಮಾಹಿತಿ ನೀಡದ ಮಾಹಿತಿ ಅಧಿಕಾರಿಗಳಿಗೆ ದಿನವೊಂದಕ್ಕೆ ರೂ. 250 ದಂಡ ವಿಧಿಸಲಾಗುವುದು. ದಂಡದ ಗರಿಷ್ಠ ಮೊತ್ತ ರೂ. 25,000/- ದಂಡ ವಿಧಿಸುವ ದಲ್ಲದೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಆದೇಶ ನೀಡುವಂತೆ ಆಯುಕ್ತರು ಆದೇಶ ನೀಡಬಹುದಾಗಿದೆ.

<u>**ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ವಿಳಾಸ ಇಂತಿದೆ:**</u>

<u>**ಮಾಹಿತಿ ಕೇಳಲು ನಾಗರೀಕರು ನೀಡಬೇಕಾದ ವಿವರಗಳು:**</u>

ಮುಖ್ಯಮಾಹಿತಿ ಆಯುಕ್ತರು<br>
ಕರ್ನಾಟಕ ರಾಜ್ಯ ಮಾಹಿತಿ ಆಯೋಗ<br>
ಕೊಠಡಿ ಸಂಖ್ಯೆ , 302, 302ಎ, ಮೂರನೇ ಮಹಡಿ<br>
ವಿಧಾನಸೌಧ, ಬೆಂಗಳೂರು – 560001

---

ಗೆ

ಸಾರ್ವಜನಿಕ ಮಾಹಿತಿ ಅಧಿಕಾರಿ

..............................

1) ಅರ್ಜಿದಾರರ ಪೂರ್ಣ ಹೆಸರು:..............................

2) ಪೂರ್ಣ ವಿಳಾಸ :..............................

3) ನಿರ್ದಿಷ್ಟವಾಗಿ ಬೇಕಾದ ಅಥವಾ ಪರಿಶೀಲಿಸಬೇಕಾದ ವಿವರಗಳು (ಅ)<br>
(ಬ)<br>
(ಕ)

4) ಮಾಹಿತಿ ಯಾವ ವರ್ಷಕ್ಕೆ ಸಂಬಂಧಿಸಿದ್ದು ..............................

5) ಇತರೆ ವಿವರ :..............................

6) ಅರ್ಜಿ ಶುಲ್ಕ ರೂ.10/- ಪಾವತಿ ಮಾಡಿರುವ ವಿವರ:

ಭಾರತೀಯ ಪೋಸ್ಟಲ್ ಆರ್ಡರ್, ಡಿಡಿ/ ಚೆಕ್ ಸಂಖ್ಯೆ : ..............................<br>
ದಿನಾಂಕ ..............................

ಸ್ಥಳ :                                                  *ಅರ್ಜಿದಾರರ ಸಹಿ*<br>
ದಿನಾಂಕ:

---

ಈ ಹಕ್ಕನ್ನು ಚಲಾಯಿಸಲು ಇದರ ಕುರಿತು ಸ್ಪಷ್ಟವಾಗಿ ಅರಿತು ಇತರರಿಗೆ ತಿಳಿಸುವ ಮುಖಾಂತರ ಆಡಳಿತ ಯಂತ್ರಗಳನ್ನು ಉತ್ತರದಾಯಿತ್ವ, ಪಾರದರ್ಶಕತೆ ಹಾಗೂ ಜವಾಬ್ದಾರಿಯನ್ನು ತರುವುದರಲ್ಲಿ ನಾವೆಲ್ಲರೂ ಪ್ರಯತ್ನಿಸುವ ಮೂಲಕ ಈ ಮಾಹಿತಿ ಹಕ್ಕು ಪ್ರಜಾಸತಾತ್ಮಕ ರೀತಿಯ ಜೀವನಕ್ಕೆ ಆನುಕೂಲಕರ ವಾತಾವರಣ ಸೃಷ್ಟಿಸಬಹುದಾಗಿದೆ. ಆದರೆ ಅದು ನಮ್ಮ ನಿಮ್ಮೆಲ್ಲರ ಸಕ್ರಿಯ ಭಾಗವಹಿಸುವಿಕೆ ಮತ್ತು ಬೆಂಬಲದಿಂದ ಮಾತ್ರ ಸಾಧ್ಯ.

*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :*<br>
**ಸಿವಿಕ್**<br>
ನಂ. 14, 2ನೇ ಮಹಡಿ, 4ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆ, ವಸಂತನಗರ, ಬೆಂಗಳೂರು – 52. ದೂರವಾಣಿ : 22386864.

❑

## ಇ.ಎಸ್.ಐ. ತಿದ್ದುಪಡಿ

ಕಳೆದ ಜನವರಿ ಸಂಚಿಕೆಯಲ್ಲಿ 'ಅರಿವು' ಅಂಕಣದ ಇ.ಎಸ್.ಐ. ಸೌಲಭ್ಯಗಳ ಮಾಹಿತಿ ಲೇಖನದ 11ನೇ ಅಂಶದಲ್ಲಿ 100 ರೂ.ಗಳ ವೈದ್ಯಕೀಯ ಬೋನಸ್ ಎಂಬಲ್ಲಿ 1000 ರೂ. ಎಂದು ಓದಿಕೊಳ್ಳಲು ವಿನಂತಿ.

– *ಸಂ.*



Scanned with OKEN Scanner

## NTUI : ಚರಿತಾರ್ಹ ಘಟನೆಗೆ ಸಾಕ್ಷಿಯಾದ GATWU

ಅನುಭವ

ದೆಹಲಿಯಲ್ಲಿ ನಡೆದ NTUI ಸಂಸ್ಥಾಪನಾ ದಿನದಂದು ಬೆಂಗಳೂರಿನಿಂದ GATWU ಹಾಗೂ ಮುನ್ನಡೆಯ ಪ್ರತಿನಿಧಿಗಳಾಗಿ ನಾವು ಸುಮಾರು 10 ಜನ ಮಹಿಳಾ ಕಾರ್ಮಿಕರು ಭಾಗವಹಿಸಿದ್ದೆವು. ಒಬ್ಬ ಸಾಮಾನ್ಯ ಗಾರ್ಮೆಂಟ್ಸ್ ಕಾರ್ಮಿಕರಾಗಿ 'ಕಾರ್ಮಿಕ ಸಂಘಟನೆ' ಎಂಬ ಹೆಸರಿನಿಂದಲೇ ದೂರ ಉಳಿದಿದ್ದ ನಾವುಗಳು, ಈಗ್ಗೆ ನಾಲ್ಕು ವರ್ಷಗಳಿಂದ ಅನೇಕ ತರಬೇತಿ, ಸಭೆಗಳ ನಂತರ ನಮ್ಮದೇ ಆದ 'ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್'ಅನ್ನು ರಚಿಸಿಕೊಂಡಿದ್ದೇವೆ. GATWUವಿನ ಸದಸ್ಯರಾದ ನಾವು ನೂರಾರು ಮೈಲಿಗಳ ಆಚೆಗಿನ ದೆಹಲಿಯಲ್ಲಿ ಯೂನಿಯನ್ ಒಕ್ಕೂಟ ಒಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನಿಜಕ್ಕೂ ಹೆಮ್ಮೆಯ ವಿಷಯ.

ಹಲವಾರು ರಾಜಕೀಯ ಪಕ್ಷಗಳ ಸುಪರ್ದಿಯಲ್ಲಿ ನಿಂತ ಇತರೆ ಯೂನಿಯನ್‌ಗಳಂತಲ್ಲದೆ, NTUI ವಿಶೇಷವಾಗಿ ತೋರುತ್ತದೆ. ಇದು ಯೂನಿಯನ್ ಅಲ್ಲ, ಯೂನಿಯನ್‌ಗಳ ಒಕ್ಕೂಟ. ಆದ್ದರಿಂದಲೇ GATWU ಕೂಡ ಅದರ ಒಂದು ಅಂಗವಾಗಿದೆ. ಅಂದು ನಡೆದ ಕಾರ್ಯಕ್ರಮದಲ್ಲಿ ನಮ್ಮಂತೇ ಅನೇಕ ಕಾರ್ಮಿಕ ಸಂಘಟನೆಗಳು ಬಂದಿದ್ದವು. ಕಲ್ಲಿದ್ದಲು ಗಣಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಪೌರ ಕಾರ್ಮಿಕರು, ಕಲ್ಲು ಒಡೆಯುವ ಕಾರ್ಮಿಕರು, ಮನೆಗೆಲಸದವರು ಹೀಗೆ ಬಹುತೇಕ ಎಲ್ಲಾ ಅಸಂಘಟಿತ ಕಾರ್ಮಿಕರು ಅಲ್ಲಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಕಾರ್ಮಿಕ ಮುಖಂಡರೂ NTUIನ ಉದ್ದೇಶವನ್ನು ಎತ್ತಿಹಿಡಿದರು. GATWUವಿನ ಸದಸ್ಯರಾದ ನಾವುಗಳು, ಅನೇಕ ಕಾರ್ಮಿಕ ಜಾಗೃತಿ ಗೀತೆಗಳನ್ನೂ ಹಾಡಿದೆವು. ಈ ಸಭೆಯಲ್ಲಿ ಭಾಗವಹಿಸಿದಾಗ, ಚರಿತ್ರಾರ್ಹ ಘಟನೆಯೊಂದಕ್ಕೆ ಸಾಕ್ಷಿಯಾದೆವೆಂಬ ಭಾವನೆ ಮನೆಮಾಡಿತ್ತು.

*– ದೆಹಲಿ ಸಭೆಯಲ್ಲಿ ಭಾಗವಹಿಸಿದ್ದ ಕಾರ್ಮಿಕರು*
*ಅನಸೂಯ, ಸುಧಾ, ಗೀತಾ, ಮುಂತಾದವರು*

ಮಾಹಿತಿ

## ಕಾರ್ಮಿಕರೇ ಗಮನಿಸಿ....

ರಾಜ್ಯ ಸರ್ಕಾರವು ಕಾರ್ಮಿಕರ ತುಟ್ಟಿಭತ್ಯೆ (DA)ಯನ್ನು ಘೋಷಿಸಿದ್ದು, ಈ ಹೆಚ್ಚಿನ ಭತ್ಯೆಯು 1-4-2006ರಿಂದ ಜಾರಿಗೆ ಬರಬೇಕು. ಏರಿಕೆಯಾಗಿರುವ ಅಂಶಗಳು ಈ ಕೆಳಗಿನಂತಿದೆ.

| | | |
|---|---|---|
| ಹೆಚ್ಚಳವಾದ ಅಂಶಗಳು | : | 119 |
| ಪ್ರತಿ ಅಂಶಕ್ಕೆ | : | 3 ಪೈಸೆ |
| ಒಟ್ಟು ಹೆಚ್ಚಳವಾದ ವೇತನ ತಿಂಗಳಿಗೆ | : | 119 x 3 ಪೈಸೆ x 30 ÷ 100 = 107.10 ಪೈಸೆ |
| ಪ್ರತಿ ದಿನಕ್ಕೆ | : | 107.10 ÷ 26 = ರೂ. 4.11 ಪೈಸೆ |

ಕಾರ್ಮಿಕರ ಮೇ ತಿಂಗಳ ವೇತನದಲ್ಲಿ 107.10 ರೂ.ಗಳಷ್ಟು ವೇತನ ಹೆಚ್ಚಳವಾಗಬೇಕು. ವೇತನ ಹೆಚ್ಚಳವಾಗದಿದ್ದರೆ, ಹಾಗೂ ಹೆಲ್ಪರ್‌ಗಳಿಗೆ ಪ್ರತಿದಿನಕ್ಕೆ 88.75 ರೂ.ಗಳಿಗಿಂತ ಕಡಿಮೆ ವೇತನ ದೊರೆಯುತ್ತಿದ್ದರೆ GATWUವನ್ನು ಈ ಸಂಖ್ಯೆಯಲ್ಲಿ ಸಂಪರ್ಕಿಸಿ : 9449506451

## ಕಾರ್ಮಿಕರೇ ಎಚ್ಚರ !!

ವರದಿ

ನಾವುಗಳು ಕಷ್ಟ ಪಟ್ಟು ದುಡಿದ ಹಣದಲ್ಲಿ ಸ್ವಲ್ಪವಾದರೂ ಕಷ್ಟ ಕಾಲಕ್ಕೆ ಸಹಾಯವಾಗಲಿ ಎಂದು ಉಳಿತಾಯ ಮಾಡುವ ಯೋಜನೆಗಳ ಬಗ್ಗೆ ಎಚ್ಚರವಿರಲಿ. ಅನಧಿಕೃತ ವ್ಯಕ್ತಿಗಳ ಬಳಿ ಚೀಟಿ ವ್ಯವಹಾರ ಹಾಗೂ ಅನಧಿಕೃತ ಸಂಸ್ಥೆಗಳಲ್ಲಿ ಹಣ ಹೂಡಿ ಮೋಸ ಹೋಗದಿರಿ. ಇದಕ್ಕೆ ತಾಜಾ ನಿದರ್ಶನವೆಂದರೆ, ಮೈಸೂರು ರಸ್ತೆಯ ಬ್ಯಾಟರಾಯನಪುರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪಿ.ಆರ್. ಫ್ಯಾಷನ್ ಹಾಗೂ ಶ್ರೀರಂಗ ಎಕ್ಸ್ ಪೋರ್ಟ್ಸ್‌ನಲ್ಲಿ ಪರ್ಸನಲ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದ ಮೀನಾ ಎಂಬುವವರು ಕಾರ್ಮಿಕರ ಬಳಿ ಚೀಟಿ ಇತರ ಹಣಕಾಸು ವ್ಯವಹಾರದ ರೂಪದಲ್ಲಿ 15 ರಿಂದ 20 ಲಕ್ಷ ವಂಚಿಸಿ ಪರಾರಿಯಾಗಿದ್ದಾರೆ. ಮಕ್ಕಳ ಮದುವೆ ಹಾಗೂ ಇತರ ಆಪತ್ಕಾಲಕ್ಕೆ ಹಣ ಕೂಡಿಸಿಕೊಂಡಿದ್ದ ಕಾರ್ಮಿಕರು ಈ ರೀತಿ ವಂಚನೆಯಿಂದಾಗಿ ದಿಗ್ಭ್ರಮೆಗೊಳಗಾಗಿದ್ದಾರೆ. ಅವರ ಬಳಿ ಯಾವುದೇ ದಾಖಲೆಗಳಿಲ್ಲದೇ ಇರುವುದೂ ಒಂದು ದೊಡ್ಡ ಸಮಸ್ಯೆಯಾಗಿದೆ. ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ದಾಖಲಾಗಿದೆ.

ಯಾವುದೇ ಅನಧಿಕೃತ ಹಣಕಾಸು ಸಂಸ್ಥೆಯಲ್ಲಿ, ಅನಧಿಕೃತ ವ್ಯಕ್ತಿಗಳ ಬಳಿ ಚೀಟಿ ವ್ಯವಹಾರವನ್ನು ತಕ್ಷಣವೇ ನಿಲ್ಲಿಸಿ ಜಾಗೃತರಾಗಿ.

*ಸಂವೇದನೆ....*

*(1ನೇ ಪುಟದಿಂದ)*

ಇಂತಹ ಸಂದರ್ಭದಲ್ಲಿ ಎಲ್ಲಾ ವಲಯಗಳನ್ನು ಪ್ರತಿನಿಧಿಸುವಂತಹ ಯಾವುದೇ ರಾಜಕೀಯ ಪಕ್ಷಕ್ಕೆ ಸೇರದ ಸಂಘಟನೆಯೊಂದರ ಅವಶ್ಯಕತೆಯನ್ನು ಮನಗಂಡು ದೇಶದ ಹಲವಾರು ಸಂಘಟನೆಗಳು ಸೇರಿ ಹುಟ್ಟು ಹಾಕಿರುವುದೇ ಎನ್.ಟಿ.ಯು.ಐ ಸಂಘಟನೆ. ಇದು ತಳ ಮಟ್ಟದಿಂದ ಕಾರ್ಮಿಕರನ್ನು ಸಂಘಟಿಸುತ್ತಿರುವ ಕಾರ್ಮಿಕ ಸಂಘಗಳ ಒಂದು ಒಕ್ಕೂಟವಾಗಿದ್ದು ಎಲ್ಲಾ ವಲಯಗಳ ಕಾರ್ಮಿಕರನ್ನು ಪ್ರತಿನಿಧಿಸುತ್ತಿದೆ. ಈ ಪ್ರಯತ್ನವು ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡುವಲ್ಲಿ ಯಶಸ್ವಿಯಾಗಿ, ಕಾರ್ಮಿಕರ ಬದುಕಿನಲ್ಲಿ ಒಂದು ಆಶಾಕಿರಣವಾಗಿರಲಿ ಎಂದು ಸೂಜಿದಾರ ಬಳಗ ಆಶಿಸುತ್ತದೆ.

ಈ ಸಂಚಿಕೆಯಲ್ಲಿ ಸರ್ಕಾರವು 2005ರಲ್ಲಿ ಜಾರಿಗೆ ತಂದಿರುವ ಮಾಹಿತಿ ಹಕ್ಕು ಕಾಯ್ದೆಯ ವಿವರಗಳನ್ನು ನೀಡಲಾಗಿದೆ. ಸರ್ಕಾರದಿಂದ ಯಾವುದೇ ರೀತಿಯ ಮಾಹಿತಿಯನ್ನು ಜನಸಾಮಾನ್ಯರು ಪಡೆಯಬಹುದು. ಗಾರ್ಮೆಂಟ್ಸ್ ಕಾರ್ಮಿಕರು ಈ ಹಕ್ಕನ್ನು ಉಪಯೋಗಿಸಿಕೊಂಡರೆ ನಮ್ಮ ಶ್ರಮ ಸಾರ್ಥಕ. ☐

# ಅರಿವು

## ಫ್ಯಾಕ್ಟರಿಗಳ ಕಾಯ್ದೆ 1948

ಕಾರ್ಮಿಕರ ಕಲ್ಯಾಣಕ್ಕಾಗಿ 1948ರಲ್ಲಿ ಸರ್ಕಾರ ಕಾರ್ಖಾನೆಯ ಕಾಯಿದೆಯನ್ನು ಜಾರಿ ಗೊಳಿಸಿತು. ಈ ಕಾಯಿದೆಯು ಕಾರ್ಮಿಕರ ಆರೋಗ್ಯ, ಸುರಕ್ಷತೆ, ಕಲ್ಯಾಣ ಹಾಗೂ ವೇತನ ದೊಂದಿಗೆ ವಾರ್ಷಿಕ ರಜೆಯ ಬಗ್ಗೆ ವಿವರಿಸುತ್ತದೆ.

- ಕೆಲಸದ ಸ್ಥಳದಲ್ಲಿ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗದಂತೆ ಗಾಳಿ ಬೆಳಕಿನ ವ್ಯವಸ್ಥೆ ಕೈಗೊಳ್ಳಬೇಕು. ಕೆಲಸದ ವಾತಾವರಣ ಸ್ವಚ್ಛವಾಗಿ ಧೂಳು ರಹಿತ ವಾಗಿರಬೇಕು.
- ಕೊಠಡಿಯ ಮಿತಿಗಿಂತಲೂ ಹೆಚ್ಚು ಕಾರ್ಮಿಕರನ್ನು ಒಂದು ಕೊಠಡಿಯಲ್ಲಿ ಕೆಲಸ ಮಾಡಿಸುವುದನ್ನು ನಿಷೇಧಿಸಲಾಗಿದೆ.
- ಕೆಲಸದ ಸಂದರ್ಭದಲ್ಲಿ ಸ್ವಾಭಾವಿಕವಾದ ಅಥವಾ ಕೃತಕವಾದ ಬೆಳಕಿನ ವ್ಯವಸ್ಥೆಯನ್ನು ಮಾಡಬೇಕು.
- ಕಾರ್ಮಿಕರಿಗೆ ಸುಲಭವಾಗಿ ದೊರೆಯುವಂತೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಬೇಕು.
- ಕಾರ್ಮಿಕರಿಗೆ ಸಾಕಷ್ಟು ಶೌಚಾಲಯಗಳನ್ನು ಆಧುನಿಕ ರೀತಿಯಲ್ಲಿ ಕಲ್ಪಿಸಬೇಕು. ಈ ಶೌಚಾಲಯಗಳಲ್ಲಿ ಉತ್ತಮ ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಇರಬೇಕು. ಮಹಿಳೆ ಹಾಗೂ ಪುರುಷ ಕಾರ್ಮಿಕರಿಗೆ ಪ್ರತ್ಯೇಕ ಶೌಚಾಲಯಗಳು ಇರಬೇಕು.
- ಅಪಾಯಕಾರಿ ಯಂತ್ರೋಪಕರಣಗಳಿಂದ ಅಪಾಯವಾಗದಂತೆ ಜಾಗ್ರತೆ ವಹಿಸಬೇಕು.
- ಮೆಟ್ಟಿಲು ಹಾವಣಿಗಳು, ಮತ್ತು ಕಾರ್ಮಿಕರು ಒಟ್ಟಾಗಿ ತಿರುಗಾಡುವ ಸ್ಥಳಗಳನ್ನು ಅತ್ಯುತ್ತಮವಾಗಿ ನಿರ್ಮಿಸಿರಬೇಕು.



- ಅತಿಯಾದ ಶಬ್ದ ಗದ್ದಲಗಳನ್ನು ಉಂಟುಮಾಡುವಯಂತ್ರಗಳಿಂದ ದೂರ ಇದ್ದು, ಎತ್ತರ ಕೆಲಸವನ್ನು ಕಾರ್ಮಿಕರಿಂದ ಮಾಡಿಸಬಾರದು ಮತ್ತು ಈ ತರಹದ ಕೆಲಸಗಳಿಗೆ ರಕ್ಷಣೆಗಳನ್ನು ಒದಗಿಸಬೇಕು.
- ದೇಹದ ಅಂಗಗಳಿಗೆ ಅಪಾಯ ಉಂಟು ಮಾಡಬಹುದಾದಂತಹ ಕೆಲಸ ಮಾಡಬೇಕಾದ ಸಂದರ್ಭದಲ್ಲಿ, ರಕ್ಷಣಾ ಸಾಮಗ್ರಿಗಳನ್ನು ಒದಗಿಸಬೇಕು (ಗ್ಲೌಸ್, ಮಾಸ್ಕ್ ಇತ್ಯಾದಿ)
- ಕಾರ್ಖಾನೆಗಳಲ್ಲಿ ಬೆಂಕಿ ದುರಂತ ಗಳಾದಾಗ ಕಾರ್ಮಿಕರು ಸುರಕ್ಷಿತವಾಗಿ ಪಾರಾಗಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.
- ಸಾವಿರಕ್ಕಿಂತಲೂ ಹೆಚ್ಚು ಮಂದಿ ಕೆಲಸ ಮಾಡುವ ಕಾರ್ಖಾನೆಗಳಲ್ಲಿ ಸುರಕ್ಷತೆಯ ಉಸ್ತುವಾರಿಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕು.

*(ಮುಂದಿನ ಸಂಚಿಕೆಯಲ್ಲಿ ಫ್ಯಾಕ್ಟರಿ ಕಾಯ್ದೆಯ ಉಳಿದ ಅಂಶಗಳನ್ನು ತಿಳಿದುಕೊಳ್ಳೋಣ)* □

## ಸಲಹಾ ಮಂಡಳಿಯ ಸದಸ್ಯರು

ಮುನ್ನಡೆಯ ಕಾರ್ಯ ಚಟುವಟಿಕೆ ಹಾಗೂ ಬೆಳವಣಿಗೆಗೆ ಸಲಹೆ ಸೂಚನೆ ನೀಡಲು ಹಲವಾರು ಗಣ್ಯರು ನಮ್ಮ ಜೊತೆಯಿರಲು ಒಪ್ಪಿ ಸಲಹಾ ಮಂಡಳಿಯ ಸದಸ್ಯರಾಗಿದ್ದಾರೆ. ಅವರನ್ನೆಲ್ಲ ಪರಿಚಯ ಮಾಡಿಕೊಡಲು ನಮಗೆ ಬಹಳ ಹೆಮ್ಮೆಯೆನಿಸುತ್ತದೆ.

ಹೇಮಲತಾ ಮಹಿಷಿ, ಖ್ಯಾತ ವಕೀಲರು
ಪ್ರೊ. ಹಸನ್‌ಮನ್ಸೂರ್, ಅಧ್ಯಕ್ಷರು, ಪಿ.ಯು.ಸಿ.ಎಲ್. ಕರ್ನಾಟಕ,
ಡ್ವಾರತೆ ಬ್ಯಾರೆಟೋ, ಮುಖ್ಯ ನಿರ್ದೇಶಕರು, ಫೆಡಿನಾ
ಗೀತಾಮೆನನ್, ಸ್ತ್ರೀ ಜಾಗೃತಿ ಸಮಿತಿ
ಡಾ. ವಿಜಯಾ, ಖ್ಯಾತ ಪತ್ರಕರ್ತರು
ಎ.ಜೆ. ಶ್ರೀನಿವಾಸನ್, ಕಾರ್ಮಿಕ ವಕೀಲರು
ಗೋಪಿನಾಥ್, ಕಾರ್ಯದರ್ಶಿಗಳು ಸಿವಿಡಿಪ್ - ಇಂಡಿಯಾ
ಸೆಬಾಸ್ಟಿಯನ್ ದೇವರಾಜ್, ಫೆಡಿನಾ
ಡೋನಾ ಫರ್ನಾಂಡಿಸ್, ವಿಮೋಚನಾ
ಮಂಜುನಾಥ್ ಅದ್ದೆ, ಪತ್ರಕರ್ತರು ವರದಿಗಾರರು, 'ಅಗ್ನಿ' ಪತ್ರಿಕೆ

## ಲೋಕಲ್ ಕಮಿಟಿ

ಮುನ್ನಡೆಯು ತನ್ನ ವ್ಯಾಪ್ತಿಯನ್ನು ತಳಮಟ್ಟದಲ್ಲಿ ವಿಸ್ತರಿಸುವ ಸಲುವಾಗಿ ಲೋಕಲ್ ಕಮಿಟಿಗಳನ್ನು ರಚಿಸುವತ್ತ ಮುನ್ನುಗ್ಗಿದೆ. ಇದರರ್ಥ ಕಾರ್ಮಿಕರು ವಾಸಿಸುವ ಬೀದಿಬೀದಿಗಳಲ್ಲಿ, ವಠಾರಗಳಲ್ಲಿ ಲೋಕಲ್ ಕಮಿಟಿಗಳನ್ನು ರಚಿಸಲಾಗುತ್ತಿದೆ. ಈ ಕಮಿಟಿಗಳಲ್ಲಿ 5ರಿಂದ 15ರವರೆಗೆ ಕಾರ್ಮಿಕರು ಇರುತ್ತಾರೆ. ಈ ಕಮಿಟಿಯು ಆಗಿದ್ದಾಗ್ಗೆ ಸಭೆ ಸೇರಿ ಸಾಮಾಜಿಕ ಸಮಸ್ಯೆಗಳತ್ತ ಗಮನ ಹರಿಸುತ್ತದೆ.

ಪ್ರಮುಖ ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು, ರಸ್ತೆ, ಚರಂಡಿ, ಬೀದಿ ದೀಪ ಮುಂತಾದ ಸಮಸ್ಯೆಗಳೇ ಅಲ್ಲದೆ ವೃದ್ಧರಿಗೆ ಪಿಂಚಣಿ, ರೇಷನ್ ಕಾರ್ಡ್, ಅಂಗವಿಕಲರಿಗೆ ಅಗತ್ಯ ಸವಲತ್ತು, ಮಹಿಳೆಯರ ಮೇಲಿನ ದೌರ್ಜನ್ಯ ಮುಂತಾದ ವಿಷಯಗಳ ಕುರಿತು ಚರ್ಚಿಸಿ ಸಂಬಂಧಪಟ್ಟವರ ಗಮನಕ್ಕೆ ತರುತ್ತದೆ.

ಈಗಾಗಲೇ ಈ ಲೋಕಲ್ ಕಮಿಟಿಗಳು ನಾಯಂಡಹಳ್ಳಿಯಲ್ಲಿ ರಚನೆಯಾಗಿದ್ದು, ಬ್ಯಾಟರಾಯನಪುರ, ಈರಣ್ಣನಗುಡ್ಡೆಗಳಲ್ಲೂ ರಚಿಸಲಾಗುತ್ತಿದೆ.

## ಶುಭಾಶಯಗಳು

ಜೀವನಬಿಲ್ಲು



ನಂದಿತ
ಹುಟ್ಟಿದ ದಿನಾಂಕ: 13-3-2004
ತಾಯಿ : ದೀಪಾ
ಕಾರ್ಖಾನೆ : ವಿಗೋಸಾ ಎಕ್ಸ್‌ಪೋರ್ಟ್ಸ್



ಮೀನಾಕ್ಷಿ ಮತ್ತು ನಾರಾಯಣ
ಮದುವೆಯಾದ ದಿನಾಂಕ: 20-5-82 (25ನೇ ವರ್ಷ)
ಕಾರ್ಖಾನೆ : ಟೆಕ್ಸ್‌ಪೋರ್ಟ್ ಕ್ರಿಯೇಷನ್ಸ್

## ಆರೋಗ್ಯ ಭಾಗ್ಯ

### ಕೆಲವು ಮನೆಮದ್ದುಗಳು

**ಕಾಳು ಮೆಣಸು** : ಬಿಸಿ ಹಾಲಿಗೆ ಕಾಳು ಮೆಣಸಿನ ಪುಡಿ ಮತ್ತು ಕಲ್ಲುಸಕ್ಕರೆ ಸೇರಿಸಿ ಕುಡಿಯುವುದರಿಂದ ನೆಗಡಿ ಕಡಿಮೆ ಆಗುವುದು. ಮೆಣಸಿನ ಪುಡಿ ಬಳಸುವಲ್ಲೆಲ್ಲಾ ಕಾಳು ಮೆಣಸಿನ ಪುಡಿ ಬಳಸುವುದು ಒಳ್ಳೆಯದು

**ಮೆಂತ್ಯ** : ಒಂದು ಚಮಚ ಮೆಂತ್ಯವನ್ನು ಗಟ್ಟಿ ಮೊಸರಲ್ಲಿ ಬೆರಸಿ, ಬಾಯಿಗೆ ಹಾಕಿಕೊಂಡು ನುಂಗುವುದರಿಂದ ಆಮಶಂಕೆ ಮತ್ತು ರಕ್ತ ಭೇದಿ ಕಡಿಮೆಯಾಗುವುದು.

**ನುಗ್ಗೆ** : ನುಗ್ಗೆಸೊಪ್ಪಿನ ರಸಕ್ಕೆ ಹಾಲುಸಕ್ಕರೆ ಬೆರೆಸಿ ಮಕ್ಕಳಿಗೆ ಕುಡಿಸುವುದರಿಂದ ರಕ್ತ ಶುದ್ಧಿಗೊಂಡು ಆರೋಗ್ಯ ಸುಧಾರಣೆಯಾಗುತ್ತದೆ. ನುಗ್ಗೇಕಾಯಿ ಸೇವನೆಯಿಂದ ಪಚನಶಕ್ತಿ ವೃದ್ಧಿಯಾಗುತ್ತದೆ.

**ಒಣದ್ರಾಕ್ಷಿ** : ಒಣದ್ರಾಕ್ಷಿಯನ್ನು ನಿಯಿತವಾಗಿ ಸೇವಿಸುದರಿಂದ ಮೂಳೆಗಳು ಬಲಗೊಳ್ಳುತ್ತದೆ. ರೋಗನಿರೋಧಕ ಶಕ್ತಿ ಜಾಸ್ತಿಯಾಗುತ್ತದೆ.

**ಮೂಸಂಬಿ ರಸ** : ಗರ್ಭಿಣಿಯರಿಗೆ ಮೂಸಂಬಿ ರಸವನ್ನು ಧಾರಾಳವಾಗಿ ನೀಡಬೇಕು. ಇದರಿಂದ ಹೆರಿಗೆ ಸುಸೂತ್ರವಾಗುವುದು ಮತ್ತು ತಾಯಿ ಮಗುವಿಗೆ ರೋಗ ನಿರೋಧಕ ಶಕ್ತಿ ಬರುವುದು. *(ಸಂಗ್ರಹ)*

## ನಿಮ್ಮಾತು

'ಸೂಜಿದಾರ'ದ ಜನವರಿ ಸಂಚಿಕೆಯಲ್ಲಿ ಬರೆದಿರುವ ಸ್ವ-ಸಹಾಯ ಸಂಘಗಳ ಬಗ್ಗೆ ಓದಿ ನಮಗೂ ಇಂತಹ ಸಂಘಗಳನ್ನು ರಚಿಸುವ ಇಚ್ಛೆಯಾಗಿದೆ. ಒಟ್ಟಾಗಿ ಕೆಲಸ ಮಾಡಲು ಕಾರ್ಮಿಕರು ಇಂತಹ ಸಂಘಗಳ ಮೂಲಕ ಪರಸ್ಪರ ಸಹಾಯವಾಗಬಹುದಲ್ಲವೆ?

*-ಶೀಲ ಮತ್ತು ಸ್ನೇಹಿತರು, ಬಾಂಬೆ ರಯಾನ್ ಫ್ಯಾಶನ್*

ಇ.ಎಸ್.ಐ. ಸೌಲಭ್ಯದ ಕಿರುಮಾಹಿತಿ ಅಂಕಣ ಬಹಳ ಉಪಯುಕ್ತವಾಗಿದೆ. ನಮ್ಮ ಕಾರ್ಖಾನೆಯಲ್ಲಿ ಅನೇಕರಿಗೆ ಈವರೆಗೂ ಇ.ಎಸ್.ಐ. ಕಾರ್ಡ್‌ಗಳು ಲಭ್ಯವಾಗಿಲ್ಲ. ಇದನ್ನು ಪ್ರಶ್ನಿಸುವುದು ಹೇಗೆ?

*- ಹೆಸರು ಬೇಡ, ಕಾರ್ಮಿಕರು, ಎಫ್.ಎಫ್.ಐ.*

## ನೆರವು

ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ ಈ ಕೆಳಕಂಡ ಕಾರ್ಮಿಕ ಸಂಘಟನೆಯನ್ನು ಈ ವಿಳಾಸದಲ್ಲಿ ಸಂಪರ್ಕಿಸಬಹುದು

ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್ (GATWU)
ನಂ.8/3, ಶ್ರೀಮಾತಾ ನಿಲಯ
ನ್ಯೂಟಿಂಬರ್‌ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-29
ದೂ.: 26751320
ಮೊಬೈಲ್ : 9449506451

ಮತ್ತು

ಕಾರ್ಮಿಕರು ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸಹಾಯ ಬೇಕಿದ್ದಲ್ಲಿ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'ಯನ್ನು ಸಂಪರ್ಕಿಸಿ

ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. ಕರ್ನಾಟಕ ಮಹಿಳಾ ಆಯೋಗ
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ ಬೆಂಗಳೂರು-560009
   ದೂ.: 22216485
2. ವನಿತಾ ಸಹಾಯವಾಣಿ
   ಪೊಲೀಸ್ ಕಮಿಷನರ್, ಕಛೇರಿ ಆವರಣ
   ಇನ್‌ಫೆಂಟರಿ ರಸ್ತೆ, ಬೆಂಗಳೂರು
   ಉಚಿತ ದೂರವಾಣಿ: 1091
   ದೂ.: 22943225
3. ವಿಮೋಚನಾ
   ನಂ, 33/1-9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು-38
   ದೂ.: 25492781 / 25492782
4. ಪರ್ಯಾಯ ಕಾನೂನು ವೇದಿಕೆ (ALF)
   ನಂ.4, 3ನೇ ಅಡ್ಡರಸ್ತೆ
   8ನೇ ಮುಖ್ಯರಸ್ತೆ,
   ವಸಂತನಗರ, ಬೆಂಗಳೂರು-560052
   ದೂ.: 22356845
5. ಕರ್ನಾಟಕ ಕಾನೂನು
   ಸೇವೆಗಳ ಪ್ರಾಧಿಕಾರ
   ಅರಮನೆ ರಸ್ತೆ, ಬೆಂಗಳೂರು
   ದೂ.: 22268073 / 22203068

ಸಂಪಾದಕ ಮಂಡಳಿ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 8/3, ಶ್ರೀಮಾತಾ ನಿಲಯ, ಎನ್.ಟಿ.ವೈ. ಲೇಔಟ್, ಮೈಸೂರು ರಸ್ತೆ, ಬೆಂ-560026. ದೂ. : 2675 1320
ಪ್ರಕಾಶಕರು : ಸಿವಿಡೆಪ್-ಇಂಡಿಯಾ, ಫೆಡಿನಾ. ಮುದ್ರಣ : ಇಳಾ ಮುದ್ರಾ, ಬೆಂಗಳೂರು - 560 026. ದೂ. : 30615773 / 26757159

Scanned with OKEN Scanner